


# ಮೊಟ್ಟೆ ಸಂಪಿಗೆ!

**ಮೊಟ್ಟೆಯಾಕಾರದ ಈ ಹೂವಿನ ಹೆಸರು ಮೊಟ್ಟೆ ಸಂಪಿಗೆ. ವಿಶಿಷ್ಟ ಘಮಲಿನ ಈ ಹೂವಿಗೆ ಮ್ಯಾಗ್ನೋಲಿಯಾ ಚಂಪಕ ಎಂಬ ಹೆಸರೂ ಇದೆ. ತಿಳಿಹಳದಿ ಹಾಗೂ ಬಿಳಿ ಬಣ್ಣಗಳಲ್ಲಿ ಅರಳುವ ಈ ಹೂವಿನ ಮೂಲ ಅಮೆರಿಕ.**

**■ ಯು. ಅನಂತ್**

ಹೂವಿನ ಆಕಾರ ನೋಡಿದರೆ ಥೇಟ್ ಮೊಟ್ಟೆಯಂತೆಯೇ, ಘಮಲು ಆಘ್ರಾಣಿಸಿದರೆ ಬಲು ಮೋಹಕ, ಬಣ್ಣವೂ ತಿಳಿಹಳದಿಯಾಗಿದ್ದು ಕಣ್ಣಿಗೆ ಹಿತಕರ, ಹೂವು ಮುಟ್ಟಿದರೆ ಎಸಳು ದಪ್ಪ... ಹೀಗೆ ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿರುವ ಈ ಹೂವಿನ ಹೆಸರು ಮೊಟ್ಟೆ ಸಂಪಿಗೆ. ಇದನ್ನು ಮೊಟ್ಟೆ ಸಂಪಿಗೆ ಅಥವಾ 'ಎಗ್ ಮ್ಯಾಗ್ನೋಲಿಯಾ' ಎಂದೂ ಕರೆಯುವರು. ಇದು ಎರಡು ವಿಧದ ಎಂದರೆ ಹಳದಿ ಹಾಗೂ ಬಿಳಿ ಹೂವುಗಳನ್ನು ಬಿಡುತ್ತದೆ. ಈ ಹೂವು ಮೊಟ್ಟೆಯ ಆಕಾರದಲ್ಲಿ ಇರುವುದರಿಂದ ಇದಕ್ಕೆ ಆ ಹೆಸರು ಬಂದಿದೆ.

ನೋಡಲು ಸುಂದರವಾಗಿದ್ದರೂ, ಇದರ ಆಯುಷ್ಯ ಒಂದೇ ದಿನ. ಹಳದಿ ಮತ್ತು ಬಿಳಿ ಎರಡು ಬಣ್ಣ ವೈವಿಧ್ಯದಲ್ಲಿ ಹೂವು ಸಂಪೂರ್ಣವಾಗಿ ಅರಳದೆಯೂ ಬಹು ಸುಂದರವಾಗಿ ಕಂಗೊಳಿಸುತ್ತದೆ. ಸಂಪಿಗೆ ಜಾತಿಗೆ ಸೇರಿದ ಈ ಹೂವು ವರ್ಷದ ಎಲ್ಲ ಕಾಲದಲ್ಲೂ ಅರಳುತ್ತದೆ. ಮ್ಯಾಗ್ನೋಲಿಯಾ ಚಂಪಕಕ್ಕೆ ಹಿಂದಿಯಲ್ಲಿ ಹಿಮ್‌ಚಂಪಾ ಎನ್ನುವರು. ಮೊಟ್ಟೆ ಸಂಪಿಗೆ ಚಂದ್ರನ ಬೆಳಕಿನಲ್ಲಿ ರಾತ್ರಿ ಹೊತ್ತು ಅರಳುತ್ತದೆ. ಹಗಲಿಡೀ ಕಂಪು ಸೂಸುತ್ತಾ ನಗುತ್ತಿರುತ್ತದೆ. ಎಲೆಯ ಮರೆಯಲ್ಲಡಗಿ ಅರೆ ಬಿರಿಯುವ ಮೊಟ್ಟೆ ಸಂಪಿಗೆಯನ್ನು ನೋಡುವುದೇ ಚಂದ.

ಹೂವಿನ ಅಂದಕ್ಕೆ, ಪರಿಮಳಕ್ಕೆ ಯಾರಾದರೂ ಮಾರುಹೋಗಬಹುದು. ಇದರ ಬಗ್ಗೆ ಮಾಹಿತಿ ತಿಳಿಯುವ ಸಲುವಾಗಿ ಸಸ್ಯಶಾಸ್ತ್ರಜ್ಞರಾದ ಬೆಂಗಳೂರಿನ ವರದೇಶ ಅವರನ್ನು ಕೇಳಿದಾಗ ಅವರು ಹೇಳಿದ್ದಿಷ್ಟು.

'ಈ ಹೂವಿನ ಮೂಲ ಅಮೆರಿಕ. ಗಿಡದ ಎಲೆ ಅಗಲವಾಗಿದ್ದು (ಅಂದಾಜು 7–9 ಇಂಚುಗಳಷ್ಟು ಉದ್ದ ಹಾಗೂ 4 ಇಂಚು ಅಗಲ) ಮಾಮೂಲಿ ಬೇರೆ ಗಿಡಗಳ ಎಲೆಗಳಿಗಿಂತ ಕೊಂಚ ದಪ್ಪವೂ ಇರುತ್ತದೆ. ಮಣ್ಣಿನಲ್ಲಿ ತೇವಾಂಶ ಇರುವಲ್ಲಿ ಇದರ ಗಿಡ ಹೆಚ್ಚಿನ ಆರೈಕೆ ಇಲ್ಲದೆ ಸುಲಭವಾಗಿ ಬೆಳೆಯುತ್ತದೆ. ಹೂವಿನ ಘಮಲು ಹೆಚ್ಚು. ಇದರ ಪರಿಮಳ ಕೆಲವರಿಗೆ ತಲೆನೋವು ಬರಿಸುವಷ್ಟು ಇರುತ್ತದೆ' ಎನ್ನುವುದು ವರದೇಶ ಅಭಿಪ್ರಾಯ.

'ಮೊಟ್ಟೆ ಸಂಪಿಗೆ ಮ್ಯಾಗ್ನೋಲಿಯೇಸಿ (MAGNOLIACEAE) ಕುಟುಂಬಕ್ಕೆ ಸೇರಿದ ಸಸ್ಯ. ಮ್ಯಾಗ್ನೋಲಿಯಾ ಗ್ರ್ಯಾಂಡಿಫ್ಲೋರಾ (Magnolia grandiflora) ಪ್ರಭೇದಕ್ಕೆ ಸೇರಿದೆ. ಇದನ್ನು ಲಿಲ್ಲಿ ಮ್ಯಾಗ್ನೋಲಿಯಾ ಎಂದೂ ಕರೆಯುವುದಿದೆ. ಕರ್ನಾಟಕದಲ್ಲೂ ಕರಾವಳಿ, ಮಲೆನಾಡುಗಳಲ್ಲಿ ಮನೆಗಳ ಅಂಗಳದಲ್ಲಿ ಬೆಳೆಯುತ್ತಾರೆ' ಎಂದು ಮತ್ತಷ್ಟು ಮಾಹಿತಿ ನೀಡುತ್ತಾರೆ ಅವರು.

ಈ ಹೂವಿನ ಬಗ್ಗೆ ಮಾಹಿತಿ ಪಡೆದವರಿಗೆ ಮನೆಯ ಹಿತ್ತಲಿನಲ್ಲಿ ಮೊಟ್ಟೆ ಸಂಪಿಗೆಯ ಒಂದು ಗಿಡ ಹಾಕುವ ತವಕ ಖಂಡಿತಾ ಬಂದೇ ಬರುತ್ತದೆ.

### ಸೌಂದರ್ಯವರ್ಧನೆಗೆ...

ಮೊಟ್ಟೆ ಸಂಪಿಗೆಯನ್ನು ಸೌಂದರ್ಯವರ್ಧನೆಗೂ ಬಳಸುವುದಿದೆ. ಈ ಹೂವಿನ ಎಸೆನ್ಸ್ ಬಳಸಿ ಸುಗಂಧ ದ್ರವ್ಯ ತಯಾರಿಸಲಾಗುತ್ತದೆ. ಪಾರ್ಲರ್‌ಗಳಲ್ಲಿ ಹೂವುಗಳ ಫೇಸ್‌ಪ್ಯಾಕ್ ಮಾಡುವಾಗ ಈ ಹೂವಿನ ದಳಗಳನ್ನೂ ಬಳಸಲಾಗುತ್ತದೆ ಎನ್ನುವುದು ಸೌಂದರ್ಯತಜ್ಞರ ಅಭಿಪ್ರಾಯ.

ತಲೆಗೂದಲು ಉದುರುತ್ತಿದ್ದರೆ ಮೊಟ್ಟೆ ಸಂಪಿಗೆ ಎಸಳುಗಳನ್ನು ನಿಂಬೆರಸದೊಂದಿಗೆ ಮಿಕ್ಸ್ ಮಾಡಿ ಕೂದಲಿನ ಬುಡಕ್ಕೆ ಹಚ್ಚಿದರೆ ಪ್ರಯೋಜನಕಾರಿ. ತಲೆಹೊಟ್ಟು ಹೆಚ್ಚಾಗಿದ್ದರೂ ಇದರ ಬಳಕೆ ಒಳ್ಳೆಯದು. ■

